**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು, ದಿನಾಂಕ.09.12.2024**

**ಮುಂದುವರಿದ ಪಾಟಿ ಸವಾಲುಃ ವಾದಿಗಳ ಪರ ಶ್ರೀ.ಎ ಆರ್ ಎಸ್ ಆರ್ ವಕೀಲರಿಂದಃ**

1. 13 ಆಸ್ತಿಗಳಿಗೆ ಸಂಬಂದಿಸಿದಂತೆ ಈ ದಾವೆಯನ್ನು ಹೊರತು ಪಡಿಸಿ ಮಾನ್ಯ ಹಿರಿಯ ದಿವಾನಿ ನ್ಯಾಯಾಲಯದಲ್ಲಿ ಬಾಕಿ ಇರುತ್ತದೆ, ಆದರೆ ಅದರ ಸಂಖ್ಯೆ ನನಗೆ ಗೊತ್ತಿರುವುದಿಲ್ಲ. ನನ್ನ ಅಕ್ಕಂದಿರಾದ ಪ್ರತಿವಾದಿ-5 ರಿಂದ 7 ರವರಿಗೆ ಆಸ್ತಿ ಇರುತ್ತದೆ, ಆದರೆ ಅದರ ವಿವರಗಳು ನನಗೆ ಗೊತ್ತಿರುವುದಿಲ್ಲ. ಸದರಿ ಆಸ್ತಿಗಳ ಬಗ್ಗೆ ನಾನು ಅವರಿಂದ ಸಂಪೂರ್ಣ ಮಾಹಿತಿ ತಿಳಿದುಕೊಂಡಿರುವುದಿಲ್ಲ. ಆ ಕಾರಣದಿಂದ ಅವರ ಕುಟುಂಬದಲ್ಲಿ ಏನು ಏನು ವ್ಯವಹಾರಗಳು ಆಗಿದೆ ಮತ್ತು ಎಷ್ಟು ಆಸ್ತಿಗಳಿದೆ ಎಂದು ನನಗೆ ಗೊತ್ತಿರುವುದಿಲ್ಲ ಎಂದರೆ ಸರಿ. 7 ನೇ ಪ್ರತಿವಾದಿ ಈ ದಿನ ನ್ಯಾಯಾಲಯದ ಮುಂದೆ ಹಾಜರಿದ್ದು, ಅವರಿಗೆ ಾಕ್ಷಿ ನುಡಿಯಲು ಯಾವುದೇ ತೊಂದರೆ ಇರುವುದಿಲ್ಲ ಎಂದರೆ ಸರಿ. 7 ನೇ ಪ್ರತಿವಾದಿಗಳಿಗೆ ಸಂಬಂದಿಸಿದ ಎಲ್ಲಾ ದಾಖಲೆಗಳನ್ನು ಈಗಾಗಲೇ ಹಾಜರು ಪಡಿಸಿರುತ್ತೇನೆ. 7 ನೇ ಪ್ರತಿವಾದಿ 21 ಗುಂಟೆ ಆಸ್ತಿಯನ್ನು ವಿಜಯಪುರದಲ್ಲಿ ಖರೀದಿ ಮಾಡಿದ್ದ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ಸದರಿ ಆಸ್ತಿಯನ್ನು ಯಾವಾಗ ಖರೀದಿ ಮಾಡಿದರು ಎಂದು ಇಸವಿ ಗೊತ್ತಿರುವುದಿಲ್ಲ, ಆದರೆ ಚೆಕ್ಕುಬಂದಿ ಗೊತ್ತಿರುತ್ತದೆ. ಆ ಸಂದರ್ಬದಲ್ಲಿ ನನ್ನ ತಂದೆ ಬುದುಕಿರಲಿಲ್ಲ.

2. 7 ನೇ ಪ್ರತಿವಾದಿ 6 ನೇ ಪ್ರತಿವಾದಿಯಿಂದ ಮೇಲ್ಕಂಡ ಆಸ್ತಿಯನ್ನು ಖರೀದಿ ಮಾಡಿರುತ್ತಾರೆ. ಆನೇಕಲ್ಲು ತಾಲ್ಲೂಕು ಘಟ್ಟಹಳ್ಳಿ ಗ್ರಾಮದ ಆಸ್ತಿಯ ಸರ್ವೆ ನಂಬರ್ ಗಳು ನನಗೆ ಗೊತ್ತಿರುವುದಿಲ್ಲ. ದಾವಾ-7 ನೇ ಆಸ್ತಿಯು ನನ್ನ ತಂದೆಯ ಹೆಸರಿನಲ್ಲಿರುತ್ತದೆ. ಸದರಿ ಆಸ್ತಿಯನ್ನು ನನ್ನ ತಂದೆ ಜೀವಂತ ಇದ್ದಾಗ ಮನೆ ಕಟ್ಟಿದ್ದರು ಎಂದರೆ ಸರಿಯಲ್ಲ. ಸದರಿ ಜಾಗದಲ್ಲಿ ಒಟ್ಟು ಕುಟುಂಬದ ಮನೆ ಕಟ್ಟಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಪ್ರಸ್ತುತ ಶೆಡ್ ಇದೆ ಎಂದು ನುಡಿಯುತ್ತಾರೆ. ಸದರಿ ಆಸ್ತಿಯಲ್ಲಿ ನನಗೂ ಸಹ ಭಾಗಂಶ ಇರುತ್ತದೆ. ದಾವಾ-8 ಆಸ್ತಿಯನ್ನು ನನ್ನ ತಂದೆ ಜೀವಂತ ಇದ್ದಾಗ ಒಟ್ಟು ಕುಟುಂಬದ ಪರವಾಗಿ 7 ನೇ ಪ್ರತಿವಾದಿಯ ಹೆಸರಿನಲ್ಲಿ ಖರೀದಿ ಮಾಡಿದ್ದರು ಎಂದರೆ ಸರಿಯಲ್ಲ. ಸದರಿ ಆಸ್ತಿಯು ನನಗೂ ಸೇರಿದಂತೆ ಒಟ್ಟು ಕುಟುಂಬದ ಸದಸ್ಯರಿಗೆ ಭಾಗ ಇದೆ ಎಂದರೆ ಸರಿಯಲ್ಲ.

3. 7 ನೇ ಪ್ರತಿವಾದಿ ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿದರೆ ಸತ್ಯಾಂಶ ಗೊತ್ತಾಗುತ್ತದೆ ಎಂದು ನನ್ನ ಕಡೆಯಿಂದ ಸುಳ್ಳು ಸಾಕ್ಷಿ ಹೇಳುಸುತ್ತಿದ್ದಾರೆ ಎಂದರೆ ಸರಿಯಲ್ಲ. ನನ್ನ ತಂದೆ ತಾಯಿ ಜೀವಂತ ಇದ್ದಾಗ ಎಷ್ಟು ಆಸ್ತಿಗಳನ್ನು ಖರೀದಿ ಮಾಡಿದ್ದರು ಮತ್ತು ಎಷ್ಟು ಆಸ್ತಿಗಳನ್ನು ಮಾರಾಟ ಮಾಡಿದ್ದರು ಎಂದರೆ ಸಾಕ್ಷಿ ಯಾವುದನ್ನು ಮಾರಾಟ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ಆ

ರೀತಿ ನನ್ನ ತಂದೆ ದಾವಾ-1 ರಿಂದ 3 ಮತ್ತು 6 ಆಸ್ತಿಗಳನ್ನು ಖರೀದಿ ಮಾಡಿರುತ್ತಾರೆ. ಆ ಬಗ್ಗೆ ಎಲ್ಲಾ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ನನ್ನ ತಂದೆ ತಾಯಿಗಳ ವಿರುದ್ಧ ಯಾವ ಯಾವ ಪ್ರಕರಣಗಳು ಚಾಲ್ತಿಯಲ್ಲಿದ್ದವು ಮತ್ತು ನನ್ನ ತಂದೆ ತಾಯಿಗಳು ಯಾವ ಯಾವ ದಾವೆಗಳನ್ನು ಹೂಡಿದ್ದರು ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ತಂದೆ ಆಸ್ತಿಗಳನ್ನು ಮಾರಾಟ ಮಾಡಿದ್ದ ಬಗ್ಗೆ ವಾದಿಗಳು ದಾಖಲೆಯನ್ನು ಹಾಜರು ಪಡಿಸಿದ್ದು, ಅದರ ಬಗ್ಗೆ ತಿಳಿದುಕೊಂಡಿದ್ದೀರ ಎಂದರೆ ಸಾಕ್ಷಿ ಯಾವುದನ್ನು ಮಾರಾಟ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ.

4. ವಾದಿಗಳಿಗೆ ಯಾವುದೇ ಓದು ಬರಹ ಇರುವುದಿಲ್ಲ, ದುಡಿಮೆ ಮಾಡುತ್ತಾರೆ ಎಂದರೆ ಸಾಕ್ಷಿ 8 ಜನರಿಗೂ ಓದು ಬರಹ ಇರುವುದಿಲ್ಲ, ದುಡಿಮೆ ಮಾಡುತ್ತಿದ್ದೇವೆ ಎಂದು ನುಡಿಯುತ್ತಾರೆ. ದಾವಾ-6 ಆಸ್ತಿ ಬಗ್ಗೆ ಆಗಿರುವ ವ್ಯವಹಾರದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ದಿಃ22.08.1996 ರ ಕ್ರಯ ಪತ್ರದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಈ ದಾವೆ ದಾಖಲಿಸಿದ ಸಂದರ್ಬದಲ್ಲಿ ದಾವಾ-6 ಆಸ್ತಿಯ ಖಾತೆ ನನ್ನ ತಾಯಿಯ ಹೆಸರಿನಲ್ಲಿ ಖಾತೆ ಇತ್ತು. ಆ ನಂತರ ಏನು ಆಯಿತು ಎಂದು ನನಗೆ ಮಾಹಿತಿ ಇರುವುದಿಲ್ಲ. ದಾವಾ-6 ಆಸ್ತಿಗೆ ಸಂಬಂದಿಸಿದಂತೆ ನಮ್ಮ ವಕೀಲರಿಗೆ ಯಾವುದೇ ಮಾಹಿತಿ ನೀಡಿರುವುದಿಲ್ಲ. ಮುಖ್ಯ ವಿಚಾರಣೆಯನ್ನು ನಾನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ.

5. ನನಗೆ ಇಂಗ್ಲೀಶ್ ಜ್ಞಾನ ಇದ್ದು, ಇಂಗ್ಲೀಶ್ ನಲ್ಲಿ ಸಹಿ ಮಾಡಿದ್ದೇನೆ ಎಂದರೆ ಸಾಕ್ಷಿ ಅಲ್ಪ ಸ್ವಲ್ಪ ಓದಿಕೊಂಡಿದ್ದೇನೆ ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಎಲ್ಲಾ ಸಂಗತಿಗಳನ್ನು ನಾನು ಅಲ್ಲಗಳೆಯುವುದಿಲ್ಲ ಎಂದರೆ ಸರಿ. ದಾವಾ-3 ಮತ್ತು 4 ಆಸ್ತಿಗಳು ಗ್ರಾಮ ಠಾಣೆಗೆ ಹೊಂದಿಕೊಂಡ ಆಸ್ತಿಗಳು ಎಂದರೆ ಸರಿ. ಸದರಿ ಆಸ್ತಿಗಳಲ್ಲಿ ಮನೆಗಳು ಸಹ ಇದೆ ಎಂದರೆ ಸರಿ. ಸದರಿ ಮನೆಗಳಿಗೆ ಸಂಬಂದಿಸಿದಂತೆ ಪಂಚಾಯಿತಿಯವರು ಖಾತೆ ಮಾಡಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಮನೆಗಳಲ್ಲಿ ನನಗೆ ಭಾಗ ಬರಬೇಕು ಎಂದರೆ ಸರಿ. ಸದರಿ ಮನೆಗಳಿಗೆ ಸಂಬಂದಿಸಿದ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ ಎಂದರೆ ಸರಿ. ದಾವಾ-3 ಮತ್ತು 4 ಆಸ್ತಿಗಳಲ್ಲಿ ಭಾಗಂಶದ ವಿಚಾರ ನನಗೆ ಗೊತ್ತಿರುತ್ತದೆ.

6. ವಾದಿಗಳು ಯಾರ ಜೊತೆ ಶಾಮೀಲಾಗಿ ದಾವೆ ನಡೆಸುತ್ತಿದ್ದಾರೆ ಎಂದು ನನಗೆ ಗೊತ್ತಿರುವುದಿಲ್ಲ. ವಾದಿಗಳು ದಾವಾ ಆಸ್ತಿಗೆ ಸಂಬಂದಿಸಿದಂತೆ ವ್ಯವಹಾರದ ದಾಖಲೆಗಳಿಗೆ ಸಹಿ ಮಾಡಿರುವುದಿಲ್ಲ. ದಾವಾ-6 ಆಸ್ತಿಯಲ್ಲಿ ವಾದಿಗಳು ಭಾಗ ಕೇಳುವ ವಿಚಾರ ನನಗೆ ಗೊತ್ತಿರುತ್ತದೆ ಎಂದರೆ ಸರಿ. ದಿಃ22.08.1996 ರ ಕ್ರಯ ಪತ್ರಕ್ಕೆ 1 ಮತ್ತು 2 ನೇ ಪ್ರತಿವಾದಿಗಳು ಯಾವುದೇ ಸಹಿ ಮಾಡಿರುವುದಿಲ್ಲ. ದಾವಾ-6 ಆಸ್ತಿಯನ್ನು 1 ಮತ್ತು 2 ನೇ ಪ್ರತಿವಾದಿಗಳು ದಿಃ22.08.1996 ರಲ್ಲಿ ಮಾರಾಟ ಮಾಡಿರುವ ಕಾರಣ ನನಗೆ ಯಾವುದೇ ಭಾಗಾಂಶ ಇರುವುದಿಲ್ಲ ಎಂದರೆ ಸರಿಯಲ್ಲ. 5 ರಿಂದ 8 ನೇ ಪ್ರತಿವಾದಿಗಳು ಮದುವೆ ಆದ ದಿನದಿಂದ ನಾವು ಒಟ್ಟು ಕುಟುಂಬದಲ್ಲಿ ಇರುವುದಿಲ್ಲ

ಎಂದರೆ ಸರಿಯಲ್ಲ. ನಮ್ಮ ಮದುವೆಯ ಸಂದರ್ಬದಲ್ಲಿ ನನ್ನ ತಂದೆ ತಾಯಿ ನಮಗೆ ಬರಬೇಕಾದ ಎಲ್ಲಾ ಆಸ್ತಿಗಳನ್ನು ಕೊಟ್ಟಿರುವ ಕಾರಣ ನನಗೆ ಯಾವುದೇ ಆಸ್ತಿ ಬರಬೇಕಾಗಿಲ್ಲ ಎಂದರೆ ಸರಿಯಲ್ಲ. 13 ಆಸ್ತಿಗಳು ದಾವಾ-3 ಮತ್ತು 4 ಆಸ್ತಿಗಳಲ್ಲಿ ವಿಭಾಗ ಆಗಿದ್ದ ವಿಚಾರ ನನಗೆ ಗೊತ್ತಿದ್ದರೂ ಸಹ ಈ ದಾವೆಯಲ್ಲಿ ತಕರಾರು ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ. ನನಗೆ ಯಾವುದೇ ಹಕ್ಕು ಇರದೇ ಇದ್ದರೂ ತೊಂದರೆ ಕೊಡಬೇಕೆಂದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**(ಮರು ವಿಚಾರಣೆಃ ಇಲ್ಲ.)**

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಎ. ಒಪ್ಪಲಾಗಿದೆ**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ದೇವನಹಳ್ಳಿ.**